ಅಧ್ಯಕ್ಷರು: ಪ್ರಶ್ನೋತ್ತರ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ದಿನಾಂಕ:5–7–2005 ರ 23ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 163 ಪ್ರಶ್ನೆಗಳ ಪೈಕಿ 115 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ 1)

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

(ಅ) ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಕಂದಾಯ ಸಚಿವರ ಪರವಾಗಿ 2005ನೇ ಸಾಲಿನ ಕಾಗಿನಲೆ ಅಭಿವೃದ್ಧಿ ಪ್ರಾಧಿಕಾರದ ಅಧ್ಯಾದೇಶವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

(ಆ) ಏಳನೇ ಪಟ್ಟಿಯಲ್ಲಿನ ಕಾಗದ ಪತ್ರಗಳು

ಶ್ರೀ ಎನ್ ಧರ್ಮಸಿಂಗ್ (ಮುಖ್ಯಮಂತ್ರಿ) ಅವರು:– ಮಾನ್ಯ ಅಧ್ಯಕ್ಷರೇ,

1984 ರ ಲೋಕಾಯುಕ್ತ ಅಧಿನಿಯಮದ ಕಲಂ 23 ರ ಮೇರೆಗೆ:

1985 ರ ಕರ್ನಾಟಕ ಲೋಕಾಯುಕ್ತ (ಅಧಿನಿಯಮ) ನಿಯಮ 6ಎಗೆ ತಿದ್ದುಪಡಿ ಮಾಡಿ ದಿನಾಂಕ:8.4.2005ರಂದು ಹೊರಡಿಸಿರುವ ಡಿಪಿಎಆರ್:11: ಎಸ್ಎಲ್ಯು:2005ನೇ ಸಂಖ್ಯೆ ಅಧಿಸೂಚನೆ.

1984 ರ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(7)ರ ಮೇರೆಗೆ:

ಮೈಸೂರಿನ ಡಾ: ಶೋಭಾ ಅವರಿಗೆ ಮುಡಾದ ಕ್ರ.ಸಂ.ಯುಡಿಡಿ 96 ಮೈಅಪ್ರಾ 2003ರಲ್ಲಿ ನಿವೇಶನ ಹಂಚಿಕೆ ಮಾಡಿರುವ ಕುರಿತು ಲೋಕಾಯುಕ್ತದವರು ನೀಡಿದ ವಿಶೇಷ ವರದಿಯ ಮೇಲೆ ಸರ್ಕಾರವು ಕೈಗೊಂಡ ಕ್ರಮದ ವಿವರಣಾ ಪಟ್ಟಿ.

1992ರ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಅಧಿನಿಯಮ9(3) ರ ಪ್ರಕರಣದ ಮೇರೆಗೆ:

ರಾಜ್ಯ ಪೋಲಿಸ್ ಪಡೆಗಳ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ನೀಡಿರುವ ಸೌಲಭ್ಯಗಳ ರೀತಿಯಲ್ಲಿ